ಚಿಕ್ಕೋಡಿ ತಾಲ್ಲೂಕು ಮೂಲಕ ಹಾದು ಹೋಗುವ ಕಬ್ಬೂರು ನಾಲಾ ಕಾರ್ಯ

463 (231): ಶ್ರೀ ಎಸ್.ಎಸ್. ಭೀಮಣ್ಣನವರ್ (ಚಿಕ್ಕೋಡಿ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಮೂಲಕ ಹಾದು ಹೋಗುವ ಕಬ್ಬೂರು ನಾಲಾ (ಹಿಡಕಲ್ ಜಲಾಶಯದಿಂದ) ಕಾರ್ಯವನ್ನು ಎಂದು ಪ್ರಾರಂಭಗೊಳಿಸಲಾಯಿತು;

ಆ) ಈ ಕಾರ್ಯಕ್ಕೆ ಇದುವರೆವಿಗೂ ಆಗಿರುವ ವೆಚ್ಚವೆಷ್ಟು;

ಇ) ಈ ನಾಲಾ ಕಾರ್ಯವನ್ನು ಎಂದು ಪೂರ್ಣಗೊಳಿಸಲಾಗುವುದು;

ಈ) ಈ ನಾಲಾ ಪೂರ್ಣಗೊಂಡ ನಂತರ ಅಚ್ಚುಕಟ್ಟಿಗೊಳಪಡುವ ಪ್ರದೇಶದ ವಿಸ್ತೀರ್ಣವೆಷ್ಟು ? (ಹಳ್ಳಿವಾರು ವಿವರಗಳನ್ನೊದಗಿಸುವುದು);

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಹಿಡಕಲ್ ಜಲಾಶಯದಿಂದ ಕಬ್ಬೂರು ನಾಲಾ ಎಂಬ ಹೆಸರಿನ ಕಾಲುವೆ ಇರುವುದಿಲ್ಲ. ಆದರೆ ಚಿಕ್ಕೋಡಿ ತಾಲ್ಲೂಕಿನ ಮೂಲಕ ಹಾಯ್ದು ಕಬ್ಬೂರು ಸುರಂಗ ಮಾರ್ಗದ ಮೂಲಕ ಹೋಗುವ ಚಿಕ್ಕೋಡಿ ಶಾಖಾ ಕಾಲುವೆಯ ನಿರ್ಮಾಣ ಕಾರ್ಯವನ್ನು 1973ರಲ್ಲಿ ಪ್ರಾರಂಭಿಸಲಾಯಿತು.

ಆ) 14.05 ಕೋಟಿ ರೂ.ಗಳು.

ಇ) ಈ ಶಾಖಾ ಕಾಲುವೆಯ ಕಾಮಗಾರಿಗಳನ್ನು ಎಲ್ಲ ರೀತಿಯಿಂದಲೂ 1996ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಈ) ವಿವರಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ 231ರ ಉತ್ತರಕ್ಕೆ ಅನುಬಂಧ

ಚಿಕ್ಕೋಡಿ ಉಪ ಕಾಲುವೆಯ ಅಡಿಯಲ್ಲಿ ಪ್ರಯೋಜನ ಪಡೆಯುವ ಹಳ್ಳಿಗಳು

ಅ.ನಂ.	ಹಳ್ಳಿಗಳು	ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
1	2	3
1.	ಇಂಗಳಿ	332
2.	ಹೊಸೂರು	448
3.	ಯರನಾಳ	274
4.	ಯರಗಟ್ಟಿ	358
5.	ಬಡಕುಂದ್ರಿ	333
6.	ಕುರಣಿ	754
7.	ಸುಲ್ತಾನಪೂರ	194
8.	ಬೆನವಾಡ	94
9.	ಮದಮಕ್ಕನಾಳ	121

10.	ಬಸ್ತವಾಡ	49
11.	ಗೌಡವಾಡ	20
12.	ಅರ್ಜುನವಾಡ	18
13.	ನೋಗಿನಾಳ	120
14.	ಅವರಗೋಳ	134
15.	ಶಿರಗಾಂವ	95
16.	ಕೂಟಬಾಗಿ	412
17.	ಚಿಕಾಲ ಗುಡ್ಡ	201
18.	ಗುಡನ	407
19.	ಜಾಂಗಟಿ ಹ ಳ	221
20.	ಶಿರಢಾಣ	131
21.	ಕಡಹಟ್ಟಿ	431
22.	ಬೆಲ್ಲದ ಬಾಗೇವಾಡಿ	181
23.	ಧೂಪದಾಳ	130
24.	ಪಾಮಲದಿನ್ನಿ	624
25.	ಮಲ್ಲಾಪೂರ	398
26.	ಬಡಿಗವಾಡ	20
27.	ದಂಡಾಪೂರ	356
28.	ಜಾಗನೂರ	833
29.	ವಿಜಯನಗರ	417
30.	ಕಬ್ಬೂರ	376
31.	ಮದಾಪೂರ	207
32.	ನೀಪನಾಳ	327
33.	ಮಂಜೂರ್	193
34.	ಕೊಟಬಾಗಿ	144
35.	ದೇವಾಪೂರ ಹಟ್ಟಿ	90
36.	ಕಂಕಣವಾಡಿ	54
37.	ಸೌಂಸುದ್ದಿ	18
38.	21 ರಿಂದ 25ನೇ ಬ್ಲಾಕ್‌ನಲ್ಲಿಯ ವಿಸ್ತೀರ್ಣ ಮತ್ತು ಗೋಕಾಕ ಮತ್ತು ಚಿಕ್ಕೋಡಿ ತಾಲ್ಲೂಕಿನಲ್ಲಿಯ ಬ್ಲಾಕ್ ನಂ. 20ರ ವಿಸ್ತೀರ್ಣ	18673
39.	ಸಬಸಿ ಮೇಲೆ ಬರುವ ಯಾತ ನೀರಾವರಿಯ ಪ್ರದೇಶ ಮತ್ತು ಇನ್ನೂ ತನಿಖೆಯ ಹಂತದಲ್ಲಿರುವ ಪ್ರದೇಶದ ವಿಸ್ತೀರ್ಣ. (ಹುಕ್ಕೇರಿ ತಾಲ್ಲೂಕು)	5966
	ಒಟ್ಟು	34154 ಹೆಕ್ಟೇರು